ಕಾನೂನಿನ ನಡಿಗೆ ಮಹಿಳೆಯರ ಕಡೆಗೆ
DEEDS Since 1982

# DEEDS ಸಂವಾದ

**ಸಮತೆಯ ಸಮಾಜದೆಡೆಗೆ**

ಸಂವಾದ 2

ಖಾಸಗಿ ಪ್ರಸಾರಕ್ಕಾಗಿ ಮಾತ್ರ

## ನಿರ್ದೇಶಕರ ಮಾತು

ನಾವೆಲ್ಲರೂ ಸೇರಿ ನಮ್ಮ 18ನೇ ಲೋಕಸಭೆಯ ಸದಸ್ಯರನ್ನು ಚುನಾಯಿಸಿದ್ದೇವೆ. ಈಗ NDA ಮೈತ್ರಿ ಸರಕಾರ ರಚನೆಯಾಗಿದೆ. ಸಂವಿಧಾನದ ಆಶಯದಂತೆ ಸರಕಾರ ಕಾರ್ಯಾಚರಿಸಲಿ ಎಂದು ಆಶಿಸೋಣ.

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರವಾದ ನಂತರ ಲೋಕಸಭೆ ಮತ್ತು ರಾಜ್ಯ ವಿಧಾನ ಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಭಾಗದಷ್ಟು ಮೀಸಲಾತಿ ನೀಡಬೇಕಾಗಿದ್ದ ಮೊದಲ ಚುನಾವಣೆ ಇದಾಗಿತ್ತು. ಕಾನೂನು ಆಗಿದ್ದರೂ ಇನ್ನೂ ಕಾರ್ಯಗತವಾಗಿಲ್ಲ. 2024 ರ ಲೋಕಸಭೆ ಚುನಾವಣೆಯಲ್ಲಿ ಒಟ್ಟು 73 ಮಹಿಳೆಯರು ಚುನಾಯಿತರಾಗಿದ್ದಾರೆ, 2019ರಲ್ಲಿ ಚುನಾಯಿಸಲ್ಪಟ್ಟ 78ಕ್ಕಿಂತ 5 ಕಡಿಮೆಯಾಗಿದೆ. ರಾಜ್ಯದಲ್ಲಿ 28 ಕ್ಷೇತ್ರದಲ್ಲಿ ಸಮಬಲದಲ್ಲಿ ಸ್ಪರ್ಧಿಸಬೇಕಾದ ಮಹಿಳೆಯರ ಸಂಖ್ಯೆ 8 ಕ್ಕೆ ಸೀಮಿತವಾಗಿದೆ. ಅವರಲ್ಲಿ ಮೂರು ಮಂದಿ ಸಂಸದರಾಗಿ ಆರಿಸಿ ಬಂದಿದ್ದಾರೆ. ಕಳೆದ 33 ವರ್ಷಗಳ ನಂತರ ರಾಜ್ಯದ ಮಹಿಳಾ ಪ್ರಾತಿನಿಧ್ಯವು ಮೂರಕ್ಕೆ ಏರಿದೆ ಎನ್ನುವುದು ಸಂತಸದ ವಿಷಯ.

ಮಹಿಳೆಯರಿಗೆ ಅವಕಾಶ ಕೊಡದಿರಲು ಹಲವು ನೆಪಗಳನ್ನು ಒಡ್ಡಲಾಗುತ್ತದೆ. ಮಹಿಳೆಯರಿಗೆ ಗೆಲ್ಲುವ ಸಾಮರ್ಥ್ಯವಿಲ್ಲ, ರಾಜಕೀಯದಲ್ಲಿ ಹಿಡಿತವಿಲ್ಲ, ಅವರಿಗೇಕೆ ರಾಜಕಾರಣ? ಕುಟುಂಬ, ಅಡುಗೆ ಮನೆ, ಚೆನ್ನಾಗಿ ನಿಭಾಯಿಸಿದರೆ ಸಾಕು ಎನ್ನುವ ಮನಸ್ಥಿತಿ ಬದಲಾಗಿಲ್ಲ. ಪಕ್ಷದಲ್ಲಿ ರಾಜಕೀಯ ಕಾರ್ಯಕರ್ತೆಯರಾಗಿ ಕೆಲಸ ಮಾಡಲು ಮಹಿಳೆಯರು ಬೇಕು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಮತದಾರರ ಶಕ್ತಿಯನ್ನು ಗುರುತಿಸಿ ಅವರನ್ನು ಫಲಾನುಭವಿಗಳಾಗಿ ಮಾತ್ರ ನೋಡಲಾಗುತ್ತದೆ ವಿನಹ ಪಾಲುದಾರರಾಗಿ ಅಲ್ಲ. ಅದಕ್ಕಾಗಿ ಸರಕಾರ ಮಹಿಳಾಪರ ಯೋಜನೆ ಮಾಡುವಂತೆ ನಾವು ನಮ್ಮ ಒತ್ತಾಯ, ಬೇಡಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಹಾಕಬೇಕು.

ಪ್ರಸ್ತುತ ಹೆಣ್ಣುಮಕ್ಕಳ ಮೇಲಾಗುವ ದೌರ್ಜನ್ಯ ಅತಿರೇಕಕ್ಕೆ ಹೋಗಿರುವುದನ್ನು ನಾವು ಕಾಣುತ್ತಿದ್ದೇವೆ. ಹುಬ್ಬಳ್ಳಿ ಯ ಸ್ನೇಹ, ಅಂಜಲಿ, ಕೊಡಗಿನ ಮೀನ, ಬೆಂಗಳೂರಿನ ರೂಕ್ಸಾನ ಇವರೆಲ್ಲಾ ಪುರುಷರ ಅಹಂಕಾರಕ್ಕೆ ಮತ್ತು ಪ್ರೀತಿಯನ್ನು ನಿರಾಕರಿಸಿದ್ದಕ್ಕಾಗಿ ಬಲಿಯಾದವರು. ಪುರುಷ ಪ್ರಧಾನ ಮನಸ್ಥಿತಿಗೆ ಹಲವಾರು ಮಹಿಳೆಯರು ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಇದರ ವಿರುದ್ಧ ಸಂಘಟಿತ ಪ್ರಯತ್ನ ಆಗಬೇಕು. ಇಂತಹ ಮನಸ್ಥಿತಿಯನ್ನು ಅರ್ಥ ಮಾಡಿ, ಪೊಲೀಸರು ಪ್ರಕರಣವನ್ನು ಕ್ಷುಲ್ಲಕವಾಗಿ ತೆಗೆದುಕೊಳ್ಳದೆ ಮತ್ತು ಶೀಘ್ರವಾಗಿ ಸಂತ್ರಸ್ತರಿಗೆ ನ್ಯಾಯ ಒದಗಿಸಲು ಕ್ರಮ ತೆಗೆದುಕೊಳ್ಳಬೇಕು. ಈ ಎಲ್ಲಾ ವಿಷಯಗಳು, ಘಟನೆಗಳು ನಮ್ಮ ಕೆಲಸವನ್ನು ಇನ್ನೂ ಗಂಭೀರವಾಗಿ ಹಾಗೂ ಹೆಚ್ಚಿನ ಶಕ್ತಿಯಿಂದ ಕೆಲಸ ಮಾಡಬೇಕಾದ ಅವಶ್ಯಕತೆ ಇದೆ ಎಂದು ತೋರಿಸುತ್ತವೆ.

**ಮರ್ಲಿನ್ ಮಾರ್ಟಿಸ್**

## ಸಮಾಲೋಚನಾ ಕಾರ್ಯಕ್ರಮ

ತಳಮಟ್ಟದ ಮಾಹಿತಿ ಪಡೆದ ಮಹಿಳೆಯರು ತಮ್ಮ ಹಕ್ಕನ್ನು ಮತ್ತು ಸೌಲಭ್ಯವನ್ನು ಪಡೆಯಲು ಸರಕಾರದ ನ್ಯಾಯ ವ್ಯವಸ್ಥೆಯು ಅದಕ್ಕೆ ಸೂಕ್ತವಾಗಿರಬೇಕು. ಆ ವ್ಯವಸ್ಥೆಗಳು ಕಾರ್ಯ ನಿರ್ವಹಿಸುವ ಅಧಿಕಾರಿಗಳು ಲಿಂಗ ಸೂಕ್ಷ್ಮತೆ ಹೊಂದಲು ಮತ್ತು ಹಿಂಸೆಯಿಂದ ಬಳಲುತ್ತಿರುವ ಮಹಿಳೆಗೆ ನ್ಯಾಯ ದೊರಕಿಸಿಕೊಡುವ ಉದ್ದೇಶದಿಂದ ಸಮಾಲೋಚನಾ ಸಭೆಗಳನ್ನು ಆಯೋಜಿಸಲಾಗಿದೆ. ಈ ಸಭೆಗಳು ಪ್ರತೀ 4ತಿಂಗಳಿಗೊಮ್ಮೆ ಆರು ಜಿಲ್ಲೆಗಳಲ್ಲಿ ನಡೆಯುತ್ತಿದೆ.


ದಿನಾಂಕ ಜನವರಿ 19, 2023ರಂದು ನಡೆದ ಧಾರವಾಡದ ಸಮುಚ್ಚಯ ಸಭೆ

ಡೀಡ್ಸ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯ ಇದರ ಸಹಭಾಗಿತ್ವದಲ್ಲಿ ನಡೆಯಿತು.

2ನೇ ಹಂತದ ಸಮಾಲೋಚನಾ ಸಭೆಗೆ ಶ್ರೀ ಗುರುಪ್ರಸಾದ್–ಸದಸ್ಯ ಕಾರ್ಯದರ್ಶಿ–ಗದಗ. ಶ್ರೀಮತಿ ರೇಣುಕಾ ರಾಯ್ಕರ್–ಸದಸ್ಯ ಕಾರ್ಯದರ್ಶಿ–ಕಾರವಾರ ಇವರು ಮುಖ್ಯ ಅತಿಥಿಯಾಗಿ ಆಗಮಿಸಿದರು. ಇಲಾಖೆಗಳ ಸಿಬ್ಬಂದಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಆಲಿಸಿದರು ಮತ್ತು ಪರಿಹಾರ ನೀಡುವ ಭರವಸೆ ನೀಡಿದರು.

ಸುಮಾರು 227 ಪ್ರತಿನಿಧಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿ, ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ, ಸಖಿ, ಸಾಂತ್ವಾನ, ಮಹಿಳಾ ಪೊಲೀಸ್ ಠಾಣೆ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸ್ವಯಂ ಸೇವಾ ಸಂಸ್ಥೆಯಿಂದ ಭಾಗವಹಿಸಿದ್ದರು.

ಸಭೆಯಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಗೆ ಲಿಂಗತ್ವ ತರಬೇತಿಯನ್ನು ಆಯಾಯ ಜಿಲ್ಲೆಯ ಮುಖ್ಯ ತರಬೇತಿದಾರರು ನಡೆಸಿದರು.

## ಜಿಲ್ಲಾ ಮಟ್ಟದ ಲಿಂಗತ್ವ ತರಬೇತಿ

**ಪೂರಕ ಕಾನೂನು ಸುಗಮಕಾರರ ತರಬೇತಿ :**

ಸಮಾನತೆಯ ಸಮಾಜ ನಿರ್ಮಿಸುವ ದೃಷ್ಟಿಯಿಂದ ಡೀಡ್ಸ್ ಸಂಸ್ಥೆ ಹಲವು ವರ್ಷಗಳಿಂದ ಪೂರಕ ಕಾನೂನು ಸುಗಮಕಾರರನ್ನು ಬೆಳೆಸುತ್ತಾ ಬಂದಿದೆ. ಕಳೆದ ಆರು ತಿಂಗಳಲ್ಲಿ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಸುಮಾರು



ನವೆಂಬರ್ 6, 2023ರಂದು ಲಿಂಗತ್ವದ ಕಾರ್ಯಾಗಾರದಲ್ಲಿ ಕಾರವಾರದ ಸುಗಮಕಾರರು

150 ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಲಾಗಿದೆ. ಅವರಿಗೆ ಲಿಂಗ ಲಿಂಗತ್ವದ ಬಗ್ಗೆ ವಿಮರ್ಶಾತ್ಮಕ ಅರಿವು ಮತ್ತು ಸೂಕ್ಷ್ಮತೆ ಬೆಳೆಸುವ ನಿಟ್ಟಿನಲ್ಲಿ ಪ್ರತೀ ಜಿಲ್ಲೆಯಲ್ಲಿ ಮೂರು ದಿನದ ಚಿಂತನ ಕಾರ್ಯಾಗಾರವನ್ನು ನಡೆಸಿರುತ್ತೇವೆ. ಜನರೊಟ್ಟಿಗೆ ನಿರಂತರ ಒಡನಾಟ ಇರುವ ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಸ್ವಯಂ ಸೇವಾ ಸಂಸ್ಥೆಗಳಲ್ಲಿ ಕಾರ್ಯನಿರ್ವಯಿಸುವ ತಳಮಟ್ಟದ ಸಿಬ್ಬಂದಿಗಳು, ಎನ್‌ಆರ್‌ಎಲ್‌ಎಮ್‌ನ ಕಾರ್ಯಕರ್ತೆಯರು ಹಾಗೂ ಸ್ವ ಸಹಾಯ ಸಂಘದಲ್ಲಿರುವ ಆಸಕ್ತಿ ಇರುವ ಮಹಿಳೆಯರು ತರಬೇತಿ ಪಡೆದು ಸುಗಮಕಾರರಾದರು. ಇವರು ತಳಮಟ್ಟದಲ್ಲಿ ಕಾರ್ಯ ನಿರ್ವಹಿಸುವಂತಹ ಜನಪರ ಕಾಳಜಿಯುಳ್ಳ ವ್ಯಕ್ತಿಗಳಾಗಿರುತ್ತಾರೆ. ತಮ್ಮ ನಿಯೋಜಿತ ಸೇವೆಯಲ್ಲಿಯೂ ಲಿಂಗ ಸೂಕ್ಷ್ಮತೆಯನ್ನು ತೋರಿಸುವುದರೊಟ್ಟಿಗೆ ಜನರಿಗೆ ಅರಿವು ಮೂಡಿಸಲು ಸಂಪನ್ಮೂಲ ವ್ಯಕ್ತಿಗಳಾಗಿ ಈ ಕಾರ್ಯಾಗಾರಗಳಿಂದ ತಯಾರಾಗಿದ್ದಾರೆ.

**ಕಾರ್ಯಕ್ರಮ ಪೂರ್ವ ಅರಿವಿನ ಮಾಹಿತಿ ಸಂಗ್ರಹ**

ಕಾರ್ಯಕ್ರಮದ ಪೂರ್ವದಲ್ಲಿ ಜನರ ಆಲೋಚನೆ ವಿಧ ಮತ್ತು ಅವರ ಸಿದ್ಧತೆಯ ಮಟ್ಟವನ್ನು ತಿಳಿದುಕೊಳ್ಳಲು ಮೂಲ ಮಾಹಿತಿ ಸಂಗ್ರಹಿಸಲಾಯಿತು. ಇದರಲ್ಲಿ ಮಹಿಳೆಯರು, ಪುರುಷರು ಮತ್ತು ಹದಿಹರೆಯದ ಮಕ್ಕಳು ಸೇರಿ ಸುಮಾರು 1550 ಜನರನ್ನು ಸಂದರ್ಶನ ಮಾಡುವುದರ ಮೂಲಕ ಮೂಲ ಮಾಹಿತಿಯನ್ನು ಪಡೆಯಲಾಯಿತು.

ಮೂಲ ಮಾಹಿತಿ ಪ್ರಕಾರ 61% ಜನರು ಹಾಗೂ 58% ಹದಿಹರೆಯದ ಮಕ್ಕಳು ಹುಡುಗಿಯರಿಗೆ ಕಡಿಮೆ ಶಿಕ್ಷಣ ಸಾಕು ಮತ್ತು 78% ಜನರು ಮಹಿಳೆಯರಿಗೆ ಕಡಿಮೆ ಸಂಬಳ (ಪಗಾರ) ಸಾಕು ಎಂದು ಸಮರ್ಥಿಸುತ್ತಿದ್ದಾರೆ. 69% ಜನರು, ಗಂಡ ಹೇಳಿದ ಮಾತನ್ನು ಹೆಂಡತಿ ಕೇಳದಿದ್ದರೆ ಗಂಡನು ಹೆಂಡತಿಗೆ ಹೊಡೆಯಬಹುದು ಎನ್ನುವ ಮೂಲಕ ಕೌಟುಂಬಿಕ ದೌರ್ಜನ್ಯವನ್ನು ಒಪ್ಪಿಕೊಂಡಿದ್ದಾರೆ. 73% ಜನರು ಹಿಂಸೆಗೊಳಗಾದ ಮಹಿಳೆಯರಿಗೆ ಸಹಾಯ ಮಾಡಲು ತಾಲೂಕು ಮಟ್ಟದಲ್ಲಿ ಸಹಾಯವಾಣಿ/ಸೇವಾ ವ್ಯವಸ್ಥೆಗಳಿವೆ ಎಂಬುವುದು ತಿಳಿದಿಲ್ಲ ಎಂದಿದ್ದಾರೆ. 57% ಜನರು ಮಾನಸಿಕ ರೋಗಿಗೆ ಮದುವೆ ಮಾಡಿದರೆ ಖಾಯಿಲೆ ವಾಸಿಯಾಗುತ್ತದೆ ಎಂದು ತಿಳಿದುಕೊಂಡಿದ್ದಾರೆ. 81% ಜನರು ಲೈಂಗಿಕ ಅಪರಾಧಗಳಾದ ಲೈಂಗಿಕ ಕಿರುಕುಳ, ಅತ್ಯಾಚಾರ ವಿಷಯಗಳ ಬಗ್ಗೆ ಮನೆಯಲ್ಲಿ ಮಕ್ಕಳಿಗೆ ಮಾಹಿತಿ ನೀಡಲಿಲ್ಲ ಎಂದು ಮೂಲ ಮಾಹಿತಿಯಲ್ಲಿ ಹೇಳಿಕೊಂಡಿದ್ದಾರೆ. ಈ ಮೂಲಕ ನಾವು ತಳಮಟ್ಟದ ಜನರಲ್ಲಿ ಮಾಹಿತಿ ಕೊರತೆಯನ್ನು ತಿಳಿದುಕೊಂಡೆವು.

ಉತ್ತರ ಕನ್ನಡ, ಧಾರವಾಡ, ಬಳ್ಳಾರಿ, ಬಾಗಲಕೋಟೆ, ಗದಗ ಜಿಲ್ಲೆಗಳಲ್ಲಿ ತರಬೇತಿ ಪಡೆದ ಸುಮಾರು 120 ಸುಗಮಕಾರರು ಅವರ



ತಳಮಟ್ಟದ ಲಿಂಗತ್ವ ಮಾಹಿತಿ ಕಾರ್ಯಕ್ರಮ

ಪ್ರದೇಶದಲ್ಲಿ 219 ತಳಮಟ್ಟದ ಮಾಹಿತಿ ಕಾರ್ಯಕ್ರಮದ ಮೂಲಕ 3512 ಹದಿಹರೆಯದ ಮಕ್ಕಳು ಮತ್ತು 3490 ಮಹಿಳೆಯರಿಗೆ ಮತ್ತು ಪುರುಷರಿಗೆ ಲಿಂಗತ್ವ ಮಾಹಿತಿ ನೀಡಿದರು. ಸುಮಾರು 30000 ದಷ್ಟು ಲಿಂಗತ್ವ ಕರಪತ್ರವನ್ನು ಭಾಗಾರ್ಥಿಗಳಿಗೆ, ಮನೆಗಳಿಗೆ ಹಂಚಲಾಗಿದೆ. ಆರು ಜಿಲ್ಲೆಯ ಭಾಗಾರ್ಥಿಗಳು ಅವರ ನೆರೆಹೊರೆಯ 5 ಮನೆಗಳಿಗೆ ಭೇಟಿ ಮಾಡಿ ಲಿಂಗತ್ವದ ಕರಪತ್ರದೊಂದಿಗೆ ಮಾಹಿತಿ ನೀಡಿ ಜನರಲ್ಲಿ ಲಿಂಗತ್ವದ ಬಗ್ಗೆ ಜಾಗ್ರತಿ ಮೂಡಿಸಲು ಕೈ ಜೋಡಿಸಿದರು.

## ಮುಖ್ಯ ತರಬೇತುದಾರರ ತರಬೇತಿ



ಜಿಲ್ಲೆಗಳಲ್ಲಿ ಪೂರಕ ಕಾನೂನು ಸುಗಮಕಾರರನ್ನು ತರಬೇತುಗೊಳಿಸಲು ಆಯ್ಕೆಯಾದ ಸಂಪನ್ಮೂಲ ವ್ಯಕ್ತಿಗಳಿಗೆ 2ನೇ ಹಂತದ ಮಹಿಳಾ ಕಾನೂನುಗಳ ತರಬೇತಿಯು ಮಂಗಳೂರಿನಲ್ಲಿ ನಡೆಯಿತು. ತರಬೇತಿಯಲ್ಲಿ ಕೌಟುಂಬಿಕ ಹಿಂಸೆ ತಡೆ ಕಾಯ್ದೆ, ಬಾಲ್ಯವಿವಾಹ ನಿಷೇಧ ಕಾಯ್ದೆ, ಪೋಕ್ಸೊ ಕಾಯ್ದೆಗೆ ಸಂಬಂಧಿಸಿ ಚಟುವಟಿಕೆ ಆಧಾರಿತವಾಗಿ ವಿಷಯವಾರು ಗುಂಪುಗಳಾಗಿ ಭಾಗಾರ್ಥಿಗಳಿಂದ ಮಂಡನೆ ಮಾಡಿಸಲಾಯಿತು. ಒಟ್ಟು 31 ಮುಖ್ಯ ತರಬೇತಿದಾರರು ಬಾಗಲಕೋಟೆ, ಬಳ್ಳಾರಿ, ಧಾರವಾಡ, ಗದಗ, ಉತ್ತರ ಕನ್ನಡ, ದಕ್ಷಿಣ ಕನ್ನಡ ಜಿಲ್ಲೆಗಳಿಂದ ಭಾಗವಹಿಸಿದ್ದರು.

## ಸುಗಮಕಾರರ ಅನುಭವ ಹಂಚಿಕೆ

ಲಿಂಗತ್ವ ತರಬೇತಿ ಪಡೆದು ತಳಮಟ್ಟದಲ್ಲಿ ಮಾಹಿತಿ ಕಾರ್ಯಕ್ರಮ ನಡೆಸಿದ ಸುಗಮಕಾರರು ಅವರ ಅನುಭವ ಹಂಚಿಕೊಳ್ಳುವ ಉದ್ದೇಶದಿಂದ ಒಂದು ದಿನದ ಅನುಭವ ಹಂಚಿಕೆ ಕಾರ್ಯಕ್ರಮವನ್ನು ಐದು ಜಿಲ್ಲೆಗಳಲ್ಲಿ ಮಾರ್ಚ್ ತಿಂಗಳಲ್ಲಿ ನಡೆಸಲಾಯಿತು. ಮಾಹಿತಿ ಕಾರ್ಯಕ್ರಮ ನಡೆಸುವಾಗ ತಳಮಟ್ಟದ ಮಹಿಳೆಯರು, ಪುರುಷರು, ಹದಿಹರೆಯದ ಮಕ್ಕಳು ಲಿಂಗತ್ವ ತಾರತಮ್ಯದಿಂದ ಅವರು ಅನುಭವಿಸಿದ ನೋವುಗಳನ್ನು ಹಂಚಿಕೊಂಡರು. "ನಾನು ಉನ್ನತ ಶಿಕ್ಷಣ ಪಡೆದು ಪೊಲೀಸ್ ಆಫಿಸರ್ ಆಗುವ ಆಸೆಯನ್ನು ಹೊಂದಿದ್ದೆ. ನನ್ನ ಮನೆಯಲ್ಲಿ, ನೀನು ಹುಡುಗಿ ನಿನಗೆ ಅದೆಲ್ಲ ಅಗತ್ಯವಿಲ್ಲ ಎಂದು ಹೇಳಿ ನನ್ನನ್ನು ಮದುವೆ ಮಾಡಿದರು ಎನ್ನುತ್ತಾಳೆ ಬಳ್ಳಾರಿ ಜಿಲ್ಲೆಯ ಗೌರಿ. ಅದಕ್ಕಾಗಿ ನಾನು ಅನುಭವಿಸಿದ್ದು ಸಾಕು ನನ್ನ ಮಕ್ಕಳಿಗೆ ಈ ರೀತಿಯಾಗುವುದು ಬೇಡ. ನನ್ನ ಮಗಳಿಗೆ ಎಷ್ಟು ಕಲಿಯುವ ಆಸೆ ಇದೆಯೋ ಅಷ್ಟರ ತನಕ ಕಲಿಸುತ್ತೇನೆ ಮತ್ತು ಉನ್ನತ ಅಧಿಕಾರಿಯಾಗಿ ಬೆಳೆಯಲು ನನ್ನ ಸಹಕಾರವಿದೆ" ಎಂದರು.

ತರಬೇತಿಗೆ ಹಾಜರಾದ ಅನೇಕ ಮಹಿಳೆಯರು, ಮಕ್ಕಳು ನಮಗೆ ಲಿಂಗತ್ವದ ವಿಷಯದ ಬಗ್ಗೆ ತಿಳಿದಿರಲಿಲ್ಲ. ಇದು ಹೊಸ ವಿಷಯ. ಇನ್ನು ಮುಂದೆ ನಾವು ಮಕ್ಕಳನ್ನು ಸಮಾನರಾಗಿ ಕಾಣುತ್ತೇವೆ, ಅವರಿಗೆ ಸಮಾನವಾಗಿ ಮನೆ ಕೆಲಸ ಕಲಿಸುತ್ತೇವೆ. ಅವರ ಇಚ್ಛೆಯಂತೆ ಶಿಕ್ಷಣ ನೀಡುತ್ತೇವೆ ಎಂದು ತೀರ್ಮಾನಿಸಿದ್ದಾರೆ. ಅವರ ಮನೆಗಳಲ್ಲಿ ಮತ್ತು ಇತರರಿಗೆ ಲಿಂಗತ್ವ ಮಾಹಿತಿ ನೀಡಲು ಮಹಿಳೆಯರು ಉತ್ಸುಕರಾಗಿರುವುದನ್ನು ಸುಗಮಕಾರರು ತಿಳಿಸಿದರು. "ನನ್ನ ಮನೆಯಲ್ಲಿ ನನ್ನ ಗಂಡ, ಇಬ್ಬರು ಹೆಣ್ಣು ಮಕ್ಕಳಿದ್ದು ನನ್ನ ಗಂಡ ಕೆಎಸ್ಆರ್‌ಟಿಸಿ ನಿರ್ವಾಹಕ (ಕಂಡಕ್ಟರ್) ಆಗಿ ಕೆಲಸ ಮಾಡುತ್ತಾರೆ. ಅವರು ದೂರ ಪ್ರಯಾಣ ಹೋಗುವುದರಿಂದ ಮನೆಗೆ ರಾತ್ರಿ ಬರುವುದು ತಡವಾಗುತ್ತದೆ. ಮೊದಲು ಅವರು ಬಂದಾಗ ಅವರಿಗೆ ಎಲ್ಲಾ ಕೆಲಸ ಅಂದರೆ ಸ್ನಾನಕ್ಕೆ ನೀರು ಹಾಕಿಡುವುದು, ಟೀ ಮಾಡಿಕೊಡುವುದು, ಸ್ನಾನಕ್ಕೆ ಹೊರಟಾಗ ಟವೆಲ್, ಸೋಪು ಎಲ್ಲವನ್ನೂ ಕೊಡುತ್ತಿದ್ದೆ. ರಾತ್ರಿ ಊಟವನ್ನೂ ನಾನೇ ತಟ್ಟೆಯಲ್ಲಿ ಹಾಕಿ ಕೊಡುತ್ತಿದ್ದೆ. ಊಟದ ನಂತರ ಅವರ ತಟ್ಟೆಯನ್ನು ಉಳಿದ ಕೆಲಸವನ್ನೂ ಮಾಡಿ ಅವರು ಮಲಗಿದ ನಂತರ ನಾನು ಮಲಗುವುದು (ಲೇಟಾಗಿ) ಆಗುತ್ತಿತ್ತು. ಆದರೆ ಲಿಂಗತ್ವ ತರಬೇತಿ ಪಡೆದ ಮೇಲೆ ಅವರಿಗೂ



ಅನುಭವ ಹಂಚುತ್ತಿರುವ ಸುಗಮಕಾರರು

ಮತ್ತು ಮಕ್ಕಳಿಗೂ ಲಿಂಗ–ಲಿಂಗತ್ವದ ಬಗ್ಗೆ ತಿಳಿಸಿದ ಮೇಲೆ ಅವರ ಕೆಲಸ ಅವರು ಮಾಡಿಕೊಳ್ಳುತ್ತಾರೆ. ಮಕ್ಕಳೂ ಸಹ ಮನೆಯವರ ಹಾಗೆ ತಮ್ಮ ಕೆಲಸ ತಾವು ಮಾಡಿಕೊಳ್ಳುತ್ತಾರೆ. ಇದರಿಂದ ನಮ್ಮ ಮನೆಯಲ್ಲಿ ನೆಮ್ಮದಿ ಇದೆ. ಪ್ರೀತಿಯಿಂದ ಜೀವಿಸುತ್ತಿದ್ದೇವೆ" ಎಂದು ಕಾರವಾರದ ಸುವರ್ಣರವರು ಹಂಚಿಕೊಂಡರು.

ಲಿಂಗತ್ವ ಮಾಹಿತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳು ತಮಗಾದ ತಾರತಮ್ಯದ ಬಗ್ಗೆ ಹೀಗೆ ಹೇಳಿಕೊಂಡರು : ನಮ್ಮಲ್ಲಿ, ಮನೆಗಳಲ್ಲಿ ಗಂಡು ಮಕ್ಕಳಿಗೆ ಮನೆಕೆಲಸ ಕೊಡುವುದಿಲ್ಲ, ಹೆಣ್ಣು ಮಕ್ಕಳು ಶಾಲೆಗೆ ಹೋಗುವ ಮೊದಲು ಮತ್ತು ಶಾಲೆಯಿಂದ ಮನೆಗೆ ಬಂದು ಮನೆ ವಾರ್ತೆ ಕೆಲಸ ಮಾಡಬೇಕು, ಹೊರಗೆ ಆಟ ಆಡಲು ಒಬ್ಬಳೇ ಹೊರಗೆ ಹೋಗಲು ಬಿಡುವುದಿಲ್ಲ ಮತ್ತು ತುಂಬಾ ನಿರ್ಬಂಧಗಳನ್ನು ಹಾಕುತ್ತಾರೆ. ಆದರೆ ಗಂಡು ಮಕ್ಕಳು ಸ್ವತಂತ್ರರಾಗಿರುತ್ತಾರೆ ಎಂದು ಹೆಣ್ಣುಮಕ್ಕಳು ತಮ್ಮ ನೋವನ್ನು ತೋಡಿಕೊಂಡರು. ಈ ಕಾರ್ಯಕ್ರಮದಲ್ಲಿ 77 ಮಂದಿ ಸುಗಮಕಾರರು ಭಾಗವಹಿಸಿರುತ್ತಾರೆ.

## ಕಾನೂನು ನೆರವು

ತಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಂಡ ಮಹಿಳೆಯರು ನ್ಯಾಯಕ್ಕಾಗಿ ಬಂದಾಗ ಅವರಿಗೆ ಬೆಂಬಲ ಕೊಡಲು, ಸಾಂತ್ವನ ನೀಡಲು ಆರು ಜಿಲ್ಲೆಗಳಲ್ಲಿ ಆರು ಮಂದಿ ಯುವ ಮಹಿಳಾ ನ್ಯಾಯವಾದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.



18–2–2024ರಂದು ಬಾಗಲಕೋಟೆಯಲ್ಲಿ ಕಾನೂನು ಮಾಹಿತಿ : ನ್ಯಾಯವಾದಿ ಗೀತಾ ಪಾಟೀಲ್

ಮಹಿಳಾ ನ್ಯಾಯವಾದಿಗಳು ಆರು ಜಿಲ್ಲೆಗಳ ಸಮುಚ್ಚಯದ ಮಾಸಿಕ ಸಭೆಗೆ ಹಾಜರಾಗುತ್ತಾರೆ. ಸುಗಮಕಾರರಿಗೆ ಪ್ರಕರಣಗಳನ್ನು ಕಾನೂನು ರೀತಿಯಲ್ಲಿ ನ್ಯಾಯ ದೊರಕಿಸಲು ಸಹಾಯ ಮಾಡುತ್ತಾರೆ. ಕಳೆದ ತಿಂಗಳಿಂದ ಆರು ಜಿಲ್ಲೆಗಳಲ್ಲಿ ಕಾನೂನು ಸಹಾಯ ಕೇಂದ್ರದ ಮೂಲಕ ಹಳ್ಳಿಗಳಿಗೆ ಹೋಗಿ ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣಾ ಕಾಯ್ದೆ 2005 ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ 2012ರ ಬಗ್ಗೆ ಕಾನೂನು ಮಾಹಿತಿ ನೀಡಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಕಾರ್ಯನಿರ್ವಹಿಸುವ ಮಹಿಳಾ ನ್ಯಾಯವಾದಿ ಸುಮಿತ ಪಿ ಭೂತೆಯವರು ಫೆಬ್ರವರಿ ತಿಂಗಳ 7,2024ರಂದು ಸುಗಮಕಾರರಾದ ಆಶಾ ಫೆರ್ನಾಂಡಿಸ್‌ರವರ ಸಹಕಾರದೊಂದಿಗೆ ಕಾರವಾರದ ಬಣಗ ಗ್ರಾಮದಲ್ಲಿ ಮತ್ತು ಫೆಬ್ರವರಿ 12, 2024ರಂದು ಸುವರ್ಣ ಮಹಾಲೆಯವರ ಸಹಾಯದಿಂದ ಕಾರವಾರದ ಹರಿಜನಕೇರಿ ಅಮದಳ್ಳಿ ಗ್ರಾಮದಲ್ಲಿ 20 ಮಂದಿ ಮಹಿಳೆಯರಿಗೆ ಕೌಟುಂಬಿಕ ದೌರ್ಜನ್ಯ ಮತ್ತು ಲೈಂಗಿಕ ಅಪರಾಧಗಳ ಬಗ್ಗೆ ಮಾಹಿತಿ ನೀಡಿದರು. ಮಹಿಳೆಯರು ಕೌಟುಂಬಿಕ ದೌರ್ಜನ್ಯದಲ್ಲಿ ತಾವುಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಕಿರಿಯ ವಕೀಲರಲ್ಲಿ ಚರ್ಚಿಸಿ ಕಾನೂನು ಸಲಹೆ ಪಡೆದರು.

ಬಾಗಲಕೋಟೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಮಹಿಳಾ ನ್ಯಾಯವಾದಿ ಶ್ರೀಮತಿ ಗೀತಾ ಪಾಟೀಲ್‌ರವರು ಫೆಬ್ರವರಿ 3, 2024ರಂದು ಬಾಗಲಕೋಟೆ ತಾಲೂಕಿನ ವಿನಾಯಕ ನಗರದಲ್ಲಿ ಮತ್ತು ಸುಗಮಕಾರರಾದ ಮಲ್ಲಮ್ಮರವರ ಸಹಾಯದಿಂದ ನವನಗರದ ಬಾಂಬೆ ಕಾಲೋನಿಯಲ್ಲಿ ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣಾ ಕಾಯ್ದೆ 2005 ಮತ್ತು ಸರಕಾರದಿಂದ ಮಹಿಳೆಯರಿಗಿರುವ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು 50 ಮಂದಿ ಮಹಿಳೆಯರಿಗೆ ನೀಡಿರುತ್ತಾರೆ. ನಂತರ ಮಹಿಳೆಯರು ತಮ್ಮ ಸಮಸ್ಯೆಗಳ ಬಗ್ಗೆ ನ್ಯಾಯವಾದಿಯವರಲ್ಲಿ ಚರ್ಚಿಸಿದರು.

# ಜಿಲ್ಲಾ ಮತ್ತು ರಾಜ್ಯ ಸಮುಚ್ಛಯಗಳ ಕಾರ್ಯಕ್ರಮ

**ಜಿಲ್ಲಾ ಸಮುಚ್ಛಯ**

ಜಿಲ್ಲೆಗಳಲ್ಲಿ ಅರಿವಿನ ಮಾಹಿತಿ ಕಾರ್ಯಕ್ರಮ ಮತ್ತು ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡಲು ಆರು ಜಿಲ್ಲೆಗಳಲ್ಲಿ ಸಮುಚ್ಛಯಗಳು ಕಾರ್ಯನಿರ್ವಹಿಸುತ್ತಿವೆ.

ಆರು ಜಿಲ್ಲೆಗಳಲ್ಲಿ ಪ್ರತಿ ತಿಂಗಳು ಜಿಲ್ಲಾ ಸಮುಚ್ಛಯದ ಮಾಸಿಕ ಸಭೆಗಳು ನಡೆಯುತ್ತದೆ. ಈ ಸಭೆಗಳಲ್ಲಿ ಸರಿಸುಮಾರು 10–15 ಮಂದಿ ಸುಗಮಕಾರರು ಭಾಗವಹಿಸುತ್ತಾರೆ. ಈ ಸಭೆಗಳಲ್ಲಿ ಸುಗಮಕಾರರು ತರಬೇತಿಗೆ ದಿನಾಂಕ ನಿಗದಿಪಡಿಸುವುದು, ಸಮಾಲೋಚನಾ ಕಾರ್ಯಕ್ರಮಕ್ಕೆ ಮಾಡಬೇಕಾದ ಸಿದ್ಧತೆ ಮತ್ತು ಇಲಾಖೆಗಳ ಭೇಟಿ ಮಾಡುವುದು, ತಳಮಟ್ಟದಲ್ಲಿ ಲಿಂಗತ್ವ ತರಬೇತಿಯ ಮಾಹಿತಿ ದಿನಾಂಕ, ಸ್ಥಳ ನಿಗದಿಪಡಿಸುವುದರ ಕುರಿತು ಚರ್ಚಿಸಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಪೂರಕ ಕಾನೂನು ಸುಗಮಕಾರರಾಗಿ ತರಬೇತಿ ಪಡೆದ 89 ಮಂದಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕರಾಗಿ ಆಯ್ಕೆಯಾಗಿರುವುದು ಸಂತಸದ ವಿಷಯ. ಇವರು ಅವರವರ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರಿಗೆ ನ್ಯಾಯ ದೊರಕಿಸಿ ಕೊಡುವ ಕಾರ್ಯದಲ್ಲಿ ನಿರತರಾಗಿದ್ದಾರೆ.

**ರಾಜ್ಯ ಸಮುಚ್ಛಯ ಕಾರ್ಯಕ್ರಮಗಳು**

ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಛಯಗಳು ಸರಿಯಾಗಿ ಕಾರ್ಯನಿರ್ವಹಿಸಲು ಸಮನ್ವಯತೆ, ಇಲಾಖಾ ಸಂವಾಹಕರಾಗಿ ರಾಜ್ಯ ಸಮುಚ್ಛಯವು ನೋಡಿಕೊಳ್ಳುತ್ತದೆ. ಜಿಲ್ಲೆಯಿಂದ ಆಯ್ಕೆಯಾದ ಪ್ರತಿನಿಧಿಗಳಿಂದ ರಾಜ್ಯ ಸಮುಚ್ಛಯ ರಚನೆಯಾಗಿರುತ್ತದೆ. ಎಪ್ರಿಲ್ ತಿಂಗಳ 20, 2024ರಂದು ಮಂಗಳೂರಿನ ಸಿಓಡಿಪಿಯ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸಮುಚ್ಛಯದ ಸಭೆ ನಡೆಯಿತು. ಈ ಸಭೆಯಲ್ಲಿ ಮಹಿಳೆಯರು ತಮ್ಮನ್ನು ತಾವು ಸಮಾಜದಲ್ಲಿ ಹೇಗೆ ಬಲಪಡಿಸಿಕೊಳ್ಳಬೇಕು ಮತ್ತು ತಮಗೆ ಆಗಿರುವ ಅನ್ಯಾಯ ಮತ್ತು ಸಮಸ್ಯೆಗಳನ್ನು ಯಾವ ರೀತಿಯಲ್ಲಿ ಕಾನೂನು ವ್ಯವಸ್ಥೆಯಲ್ಲಿ ಪರಿಹರಿಸಿಕೊಳ್ಳಬೇಕು ಮತ್ತು ಜಿಲ್ಲಾ ಸಮುಚ್ಛಯಗಳನ್ನು ಗಟ್ಟಿಗೊಳಿಸಲು, ಪ್ರಕರಣವನ್ನು ನಿರ್ವಹಿಸಲು ಮತ್ತು ದೌರ್ಜನ್ಯಕ್ಕೆ ಒಳಗಾದ ಮಹಿಳೆಗೆ ಬೆಂಬಲ ನೀಡಲು, ಸಂಪನ್ಮೂಲ ವ್ಯಕ್ತಿಗಳಾಗಿ ಬೆಳೆಯಲು ಯೋಜನೆ ನಡೆಯಿತು. ಸಭೆಗೆ ದಕ್ಷಿಣ ಕನ್ನಡ, ಉತ್ತರ ಕನ್ನಡ, ಧಾರವಾಡ, ಬಳ್ಳಾರಿ, ಬಾಗಲಕೋಟೆ, ಗದಗ ಜಿಲ್ಲೆ ಪ್ರತಿನಿಧಿಗಳು ಸೇರಿ ಒಟ್ಟು 40 ಮಂದಿ ಭಾಗವಹಿಸಿದ್ದರು.

**ಒಂದು ದಿನದ ಪ್ರವಾಸ**



ಸುಗಮಕಾರರ ಪ್ರವಾಸ : ಹುಬ್ಬಳ್ಳಿಯ ಅಗರಿ ತೋಟ

ಸುಗಮಕಾರರು ತಮ್ಮ ತಂಡವನ್ನು ಇನ್ನಷ್ಟು ಗಟ್ಟಿಗೊಳಿಸಲು, ಮನೋರಂಜನೆಗಾಗಿ ಐದು ಜಿಲ್ಲೆಗಳಲ್ಲಿ ಒಂದು ದಿನದ ಪ್ರವಾಸವನ್ನು ಏರ್ಪಡಿಸಲಾಯಿತು. ಧಾರವಾಡ, ಬಾಗಲ್‌ಕೋಟೆ, ಗದಗ ಸುಗಮಕಾರರು ಹುಬ್ಬಳ್ಳಿಯ ಅಗಡಿತೋಟ ; ಉತ್ತರಕನ್ನಡದವರು ಕಾರವಾರದ ದೇವಳಮಕ್ಕ ಗ್ರಾಮ ನಿರ್ಮಿತ್ ಪಾರ್ಕ್, ಬಳ್ಳಾರಿಯವರು ಬಳ್ಳಾರಿ ಸಮೀಪದ ಪ್ರವಾಸಿಗರ ತಾಣಕ್ಕೆ ಹೋಗಿ ಪ್ರವಾಸವನ್ನು ಸಂಭ್ರಮಿಸಿದರು.

ಒಟ್ಟು 92 ಸುಗಮಕಾರರು ಭಾಗವಹಿಸಿದ್ದರು. ನಮ್ಮ ಜೀವನದಲ್ಲಿ ಹಲವಾರು ದಿನಗಳಿಂದ ಎದುರು ನೋಡುತ್ತಿದ್ದ ದಿನ ನಮ್ಮ ಪಾಲಿಗೆ ಬಂತು. ನಾವು ಕುಣಿದು ಕುಪ್ಪಳಿಸಿ ತುಂಬಾ ಸಂತೋಷಪಟ್ಟೆವು ಎಂದು ಸುಗಮಕಾರರು ತಮ್ಮ ಹರ್ಷ ವ್ಯಕ್ತಪಡಿಸಿದರು.

## ಜೆಂಡರ್ ಚಾಂಪಿಯನ್ ಯೋಜನೆ



ಜೂನ್ 15, 2024ರಂದು ದೇರಳಕಟ್ಟೆಯ ಪ್ರೌಢಶಾಲೆಯಲ್ಲಿ ನಾಯಕತ್ವದ ತರಬೇತಿ

ಭಾರತೀಯ ಸಂವಿಧಾನದ ಸಮಾನತೆಯ ಆಶಯಕ್ಕೆ ಪೂರಕವಾಗಿ ಹದಿಹರೆಯದ ಹುಡುಗರು ಮತ್ತು ಹುಡುಗಿಯರನ್ನು ಲಿಂಗಸೂಕ್ಷ್ಮಗೊಳಿಸುವುದು ಹಾಗೂ ಅವರ ಹಕ್ಕುಗಳನ್ನು ಗೌರವಿಸುವಂತಹ ವಾತಾವರಣವನ್ನು ನಿರ್ಮಾಣ ಮಾಡುವುದು ಮತ್ತು ಲಿಂಗ ಸಂವೇದನಾಶೀಲ ನಾಯಕರನ್ನಾಗಿ ರೂಪಿಸುವುದೇ ಜೆಂಡರ್ ಚಾಂಪಿಯನ್ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಮತ್ತು ವಾಮಂಜೂರು ಪ್ರದೇಶದ ಐದು ಪ್ರೌಢಶಾಲೆಗಳಲ್ಲಿ 2023ರಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಐದು ಶಾಲೆಗಳಿಂದ 150 ಮಕ್ಕಳು ಈ ಯೋಜನೆಯಲ್ಲಿ ಭಾಗವಹಿಸಿದ್ದರು. 150 ಜೆಂಡರ್ ಚಾಂಪಿಯನ್ಸ್ ಮಕ್ಕಳಿಗೆ ನಾಯಕತ್ವ, ಸಮಾನತೆ, ಹದಿಹರೆಯದ ಬದಲಾವಣೆಗಳು, ಜೀವನ ಕೌಶಲ್ಯ ತರಬೇತಿಗಳು, ಅಗತ್ಯವಿರುವ ಮಕ್ಕಳಿಗೆ ಆಪ್ತಸಮಾಲೋಚನೆ ಮೊದಲಾದ ವಿಷಯಗಳ ಮಾಹಿತಿ ನೀಡಲಾಯಿತು. ಮಕ್ಕಳು, ಪೋಷಕರು, ಶಾಲಾ ಅಧ್ಯಾಪಕರು ಯೋಜನೆಯನ್ನು ಮುಂದುವರಿಸಲು ಬೇಡಿಕೆಯನ್ನು ಇಟ್ಟಿರುತ್ತಾರೆ.

2024ರ ಸಾಲಿನಲ್ಲಿ ಈ ಯೋಜನೆಯನ್ನು ಇನ್ನೂ 11 ಶಾಲೆಗಳಿಗೆ ವಿಸ್ತರಿಸಲಾಗಿದೆ. 2024ರ ಸಾಲಿನಲ್ಲಿ 15 ಶಾಲೆಗಳಲ್ಲಿ ಜೆಂಡರ್ ಚಾಂಪಿಯನ್ ಯೋಜನೆಯ ಚಟುವಟಿಕೆಗಳನ್ನು ನಡೆಸಲಾಗುತ್ತಿದ್ದು ಮಂಗಳೂರಿನ 15 ಶಾಲೆಗಳಲ್ಲಿ ಕಾರ್ಯಕ್ರಮ ಪ್ರಾರಂಭವಾಗಿದೆ. ಮಕ್ಕಳ ಅರಿವಿನ ಮಟ್ಟವನ್ನು ತಿಳಿದುಕೊಳ್ಳಲು ಮೂಲ ಮಾಹಿತಿ ಸಂಗ್ರಹಿಸಲಾಗಿದೆ. ಸಂಪನ್ಮೂಲ ವ್ಯಕ್ತಿಗಳ ತಂಡವನ್ನು ತರಬೇತಿಗೊಳಿಸಲಾಗಿದೆ. ಸುಮಾರು 428 ಮಕ್ಕಳು ಚಟುವಟಿಕೆಗಳ ಮೂಲಕ ನಾಯಕತ್ವ ತರಬೇತಿಯ ಪ್ರಯೋಜನ ಪಡೆದಿರುತ್ತಾರೆ.

ಮುದ್ರಣ : ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A NEWS LETTER BY DEEDS, MANGALORE

ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್)

ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. - 575 002. ದೂರವಾಣಿ : 0824-2217022, 4281037

E-mail : deeds82@rediffmail.com Website : www.deedsmangaluru.in